ತಪ್ಪಿತಸ್ಥ ಅಧಿಕಾರಿಗಳ ಮೇಲೆ ನಾವು ಉಗ್ರವಾದ ಕ್ರಮ ತೆಗೆದುಕೊಂಡು ಮರಗಳು ಹೋಗದ ರೀತಿಯಲ್ಲಿ ನಾವು ತಡೆಗಟ್ಟುತ್ತೇವೆ. ಹಿಂದೆ ನಡೆಯುತ್ತಿತ್ತು. ಇತ್ತೀಚಿನ ದಿನಗಳಲ್ಲಿ ನಾವು ಸ್ವಲ್ಪ ಭದ್ರ ಕ್ರಮ ತೆಗೆದುಕೊಂಡಿದ್ದೇವೆ. ಕಡಿಮೆಯಾಗಿದೆ. ಅದೇನಾದರೂ ಇದ್ದರೆ ಮತ್ತೆ ನಾನು ಸ್ಥಳಕ್ಕೆ ಭೇಟಿ ಕೊಟ್ಟು ಯಾವ ರೀತಿ ತಡೆಗಟ್ಟಬೇಕೋ ಅದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

(೭) ಹಾಸನ ವಿಧಾನ ಸಭಾ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣ ಸ್ಥಗಿತ

ಶ್ರೀ ಕೆ. ಹೆಚ್. ಹನುಮೇಗೌಡ.—ಹಾಸನ ವಿಧಾನ ಸಭಾ ಕ್ಷೇತ್ರದಲ್ಲಿ 'ಆಶ್ರಯ' ಸ್ಕೀಮಿನ ಮನೆಗಳನ್ನು ಕಟ್ಟಲು ಹೌಸಿಂಗ್ ಬೋರ್ಡಿಗೆ ಜವಾಬ್ದಾರಿ ಕೊಟ್ಟಿದ್ದರು. ಒಂದು ವರ್ಷದಲ್ಲಿ ೨೪ ಮನೆ ಕಟ್ಟಿದ್ದರು, ೮೦ ಕಡೆ ಪಾಯ ತೆಗೆದರು. ಇನ್ನು ೮೦ ಕಡೆ ಸ್ವಲ್ಪ ಮಣ್ಣು ತೆಗೆದು ಹಾಕಿದರು. ಜನ ತಿಳಿದುಕೊಂಡಿದ್ದರು ೨೫೦ ಮನೆ ಕಂಪ್ಲೀಟಾಗುತ್ತವೆ ಎಂದು. ಈಗ ವಿಚಾರಿಸಿ ಕಂಟ್ರಾಕ್ಟರಿಲ್ಲ ನಾವೇನು ಮಾಡೋಣ ಎಂದು ಅವರು ಹೇಳುತ್ತಾರೆ. ಆಫೀಸಸ್ ಕೇಳಿದರೆ ದುಡ್ಡಿಲ್ಲ ಎನ್ನುತ್ತಾರೆ. ಬೇರೆ ಕ್ಷೇತ್ರಗಳಲ್ಲಿ ಡೈರೆಕ್ಟಾಗಿ ಡೆಪ್ಯುಟಿ ಕಮಿಶನರ್‌ಗೆ ಹಣ ಕೊಟ್ಟರೋ ಅಲ್ಲಿ ಮನೆಗಳಾಗಿವೆ. ಹೌಸಿಂಗ್ ಬೋರ್ಡಿನವರು ಮನೆ ಕಟ್ಟಲು ಎಲ್ಲೆಲ್ಲಿ ಜವಾಬ್ದಾರಿ ತೆಗೆದುಕೊಂಡರೊ ಅಲ್ಲಿ ಮನೆಗಳಾಗಿಲ್ಲ. ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೆ ನಾನು ಕಾಗದ ಬರೆದೆ, ಸಂಬಂಧಪಟ್ಟ ಮಂತ್ರಿಗೆ ಬರೆದೆ, ಹೌಸಿಂಗ್ ಬೋರ್ಡಿಗೆ ಕಾಗದ ಬರೆದೆ. ಕಡೆಗೆ ಏನೂ ಆಗಲಿಲ್ಲ. ಇಲ್ಲಿ ಮಂಚೆ ನಾನು ಎದ್ದಾಗ ಅವರು ಕುಳಿತಿದ್ದರು, ಆಗ ನೀವು ಪರ್ಮಿಷನ್ ಕೊಡಲಿಲ್ಲ, ಅವರು ಎದ್ದು ಆಚೆ ಹೋದರು, ಈಗ ನಾನು ಯಾರನ್ನು ಕೇಳಬೇಕು? ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿ ನಾನು ಎತ್ತಿದ ಪ್ರಶ್ನೆಗೆ ಅವರಿಂದ ತಾವು ಉತ್ತರ ಕೊಡಿಸಬೇಕು. ಏಕೆಂದರೆ ಮನೆಗಳಾಗಿಲ್ಲ. ಕಂಟ್ರಾಕ್ಟರ್ ಪತ್ತೆ ಇಲ್ಲ, ಅಧಿಕಾರಿಗಳನ್ನು ಕೇಳಿದರೆ ದುಡ್ಡಿಲ್ಲ ಎನ್ನುತ್ತಾರೆ, ಯಾರನ್ನು ಕೇಳಬೇಕು.

ಉಪಾಧ್ಯಕ್ಷರು.—ಮಧ್ಯಾಹ್ನ ನಿಮಗೆ ಉತ್ತರ ಕೊಡಿಸುತ್ತೇನೆ.

(೮) ಅರಣ್ಯ ಸಮಿತಿಗೆ ಅರಣ್ಯ ಪ್ರದೇಶಗಳನ್ನು ಹಸ್ತಾಂತರಿಸುವ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಸಮಿತಿ ಎಂದು ಮಾಡಿದ್ದಾರೆ, ಪ್ರತಿ ಗ್ರಾಮ ಸಭೆಗಳಲ್ಲಿ ಎರಡು ರೂ. ಸದಸ್ಯತ್ವ ಶುಲ್ಕ ಪಡೆದು ಮಾಡಿದ್ದಾರೆ. ಆ ಸಮಿತಿಯಲ್ಲಿ ಅಧ್ಯಕ್ಷರು ಪದಾಧಿಕಾರಿಗಳು ಮತ್ತು ಸದಸ್ಯರೆಲ್ಲಾ ಇದ್ದು ಈ ಅರಣ್ಯವನ್ನು ರಕ್ಷಣೆ ಮಾಡ ತಕ್ಕದ್ದು ಮತ್ತು ಅರಣ್ಯದ ಉತ್ಪಾದನೆಯ ಅರ್ಧಾಂಶವನ್ನು ಆ ಸಮಿತಿಗೆ ಕೊಟ್ಟು ಆ ಸಮಿತಿ ತನ್ನ ವ್ಯಾಪ್ತಿಯಲ್ಲಿ ಬೇಕಾದ ಕೆಲಸಗಳಿಗೆ ಖರ್ಚು ಮಾಡುವ ಕಾರ್ಯಕ್ರಮ ಮಾಡಿಕೊಂಡಿದೆ. ಈ ಸಂದರ್ಭದಲ್ಲಿ ನಾನು ಅರಣ್ಯ ಸಚಿವರನ್ನು ಕೇಳುವುದಿಷ್ಟೆ. ಆ ಸಮಿತಿಗೆ ತಾವು ನಾದರೂ ಯಾವುದಾದರೂ ಅರಣ್ಯ ಪ್ರದೇಶವನ್ನು ಹಸ್ತಾಂತರಿಸಿದ್ದೀರಾ? ಅದರ ಅಧಿಕಾರ ವ್ಯಾಪ್ತಿ ಏನು? ಆ ಕಾರ್ಯಕ್ರಮ ಸಕ್ರಿಯವಾಗಿ ನಡೆಯುತ್ತಿದೆಯೇ? ಈ ಬಗ್ಗೆ ಈಗಾಗಲೇ ಕೆಸಿಡಿಸಿ ಯನ್ನು ಅರಣ್ಯ ಸಮಿತಿಗೆ ಹಸ್ತಾಂತರ ಮಾಡುತ್ತಾರೆ ಎಂಬ ವಿಚಾರ ಇತ್ತು. ಆ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಗೊಂದಲ ಇದೆ, ಈ ಬಗ್ಗೆ ಸ್ಪಷ್ಟೀಕರಣವನ್ನು ಮಾನ್ಯ ಮಂತ್ರಿಗಳಿಂದ ಕೇಳುತ್ತಿದ್ದೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ಸಚಿವರು).—ಅಧ್ಯಕ್ಷರೇ, ನನ್ನ ಮಿತ್ರರು ಕೇಳಿದಂತೆ ಹೊಸದಾಗಿ ಒಂದು ಯೋಜನೆಯನ್ನು ಅರಣ್ಯ ಜಂಟಿ ಸಂಯೋಜನಾ ಕಾರ್ಯಕ್ರಮದಲ್ಲಿ ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಕಾರ್ಯವ್ಯಾಪ್ತಿ ಏನು ಎಂಬುದಿಲ್ಲ. ಯಾವುದಾದರೂ ಗ್ರಾಮದಲ್ಲಿ ಆ ಸಮಿತಿಗಳನ್ನು ರಚನೆ ಮಾಡಿದ್ದೇವೊ ಅಲ್ಲಿ ಅರಣ್ಯ ಇಲಾಖೆಯು ಸರ್ವೆ ನಂಬರನ್ನು ಖಾಲಿ ಇದ್ದರೆ ಅವರಿಗೆ ಅರಣ್ಯ ಬೆಳೆಯುವುದಕ್ಕೆ ಮತ್ತು ಸಂರಕ್ಷಣೆ ಮಾಡುವುದಕ್ಕೆ ಮತ್ತು ಬಂದಂತಹ ಫಸಲಿಗೆ ಅವರಿಗೆ ಅರ್ಧ ಭಾಗ ಸರ್ಕಾರಕ್ಕೆ ಉಳಿದರ್ಧ ಭಾಗದಲ್ಲಿ ೨೫ ಪರ್ಸೆಂಟ್ ಸೊಸೈಟಿಗೆ ೨೫ ಪರ್ಸೆಂಟ್ ಮತ್ತೆ ಅರಣ್ಯೀಕರಣ ಮಾಡತಕ್ಕಂತಹ ಗ್ರಾಮ ಸಭೆಗೆ ನಿರ್ಣಯ ಮಾಡಿದೆ. ಇದು ಹೊಸದಾಗಿ ಪ್ರಾರಂಭವಾಗಿರುವುದರಿಂದ ನಮ್ಮ ಗೇರುಬೀಜ ನೆಡ ಎತೊಪ ಏನಿದೆ ಅದನ್ನು ಗೇರುಬೀಜ ಅಭಿವೃದ್ಧಿ ನಿಗಮಕ್ಕೆ ಕೊಡಬೇಕೆಂದು ಸರ್ಕಾರ ಆದೇಶ ಮಾಡೀತು. ಈ ಕಮಿಟಿಗಳಾದ ನಂತರ ಆ ಭಾಗದ ಶಾಸಕರು ಸಾರ್ವಜನಿಕರು ಮತ್ತು ಕೆಲವು ಸಂದರ್ಭದಿಂದು ಅವನ್ನು ಕೆಸಿಡಿಸಿಗೆ ಒಪ್ಪಿಸಿದ್ದಾರೆ ಆ ಸಮಿತಿ ಮಾಡಿದ ಉದ್ದೇಶ ನಿರರ್ಥಕವಾಗುವುದಿಲ್ಲ. ಆದ್ದರಿಂದ ಆ ಆದೇಶವನ್ನು ಮರು ಪರಿಶೀಲನೆ ಮಾಡುತ್ತೇನೆ. ನಾನು